

# ಮಧುಮೇಹ ರೆಟಿನೊಪತಿ

ಮಧುಮೇಹಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಸಕ್ಕರೆ ಕಾಯಿಲೆ ನಿಯಂತ್ರಣದಲ್ಲಿ ಇಲ್ಲದೇ ಇದ್ದಲ್ಲಿ ಹೃದಯ, ಕಣ್ಣು, ಕಿಡ್ನಿಗಳಿಗೆ ಹಾನಿ ಕಟ್ಟಿಟ್ಟ ಬುತ್ತಿ. ಕಣ್ಣಿನಲ್ಲಿ ಪೊರೆ, ಮಂಜಾಗುವುದು, ಕಣ್ಣಿನ ನರಗಳಲ್ಲಿ ಊತ ಮುಂತಾದ ಸಮಸ್ಯೆಗಳ ಜೊತೆಗೆ ರೆಟಿನೊಪತಿಯೂ ಮಧುಮೇಹದಿಂದ ಬರುತ್ತದೆ.

■ ಡಾ. ಶ್ರೀಲಕ್ಷ್ಮಿ ಶ್ರೀನಿವಾಸನ್

ಐವತ್ತೈದು ವರ್ಷದ ವಯಸ್ಕರೊಬ್ಬರು ನನ್ನ ಬಳಿ ಬಂದು ಕಳೆದ 15 ದಿನಗಳಿಂದ ಬಲಗಣ್ಣು ಸ್ವಲ್ಪ ಮಂಜಾಗಿದೆ, ಸರಿಯಾಗಿ ಓದಲು ಸಾಧ್ಯವಾಗುತ್ತಿಲ್ಲ ಎಂದರು. ಅವರಿಗೆ ಸುಮಾರು ಹತ್ತು ವರ್ಷಗಳಿಂದ ಮಧುಮೇಹ ಇತ್ತು. ನಿಯಂತ್ರಣ ಅಷ್ಟೇನೂ ಸಮರ್ಪಕವಾಗಿರಲಿಲ್ಲ. ರಕ್ತದಲ್ಲಿ ಸಕ್ಕರೆಯ ಮಟ್ಟ ಅತಿ ಹೆಚ್ಚು ಏರುಪೇರುಗಳನ್ನು ಕಾಣುತ್ತಿತ್ತು. ಕಿಡ್ನಿ ತೊಂದರೆಯೂ ಇತ್ತು. ಪಾಪೆಯನ್ನು ಅಗಲಿಸಿ ಪರೀಕ್ಷೆ ಮಾಡಿದಾಗ ಅವರಿಗೆ ಮಧುಮೇಹ ರೆಟಿನೊಪತಿಯಿಂದಾಗಿ ಬಲಗಣ್ಣಿನ ನರದಲ್ಲಿ ಊತ ಕಾಣಿಸಿಕೊಂಡಿತ್ತು ಮತ್ತು ಕಣ್ಣಿನಲ್ಲಿ ಹೊಸ ರಕ್ತನಾಳಗಳು ಕಾಣಿಸಿಕೊಂಡಿದ್ದವು.

ಆ ಹಿರಿಯರಿಗೆ ಮಧುಮೇಹ ರೆಟಿನೊಪತಿ ಎಂದರೆ ಏನು, ಅದು ಏಕೆ ಕಣ್ಣಿನಲ್ಲಿ ಕಾಣಿಸಿಕೊಳ್ಳುತ್ತದೆ, ಅದರ ಉಲ್ಬಣಕ್ಕೆ ಪೂರಕ ಕಾರಣಗಳೇನು? ಅಷ್ಟೊಂದು ಪರೀಕ್ಷೆಗಳು ಚಿಕಿತ್ಸೆಗಳು ನಿಜವಾಗಿ ಬೇಕೆ? ಸ್ವಲ್ಪ ಕನ್ನಡಕ ಹಾಕಿಕೊಂಡರೆ ಸಾಲದೇ? ಮುಂತಾದ ಪ್ರಶ್ನೆಗಳಿಗೆ ಸಮಂಜಸ ಉತ್ತರ ನೀಡಿ ಚಿಕಿತ್ಸೆಯನ್ನೂ ನೀಡಿ ಕಳಿಸಿದೆ.

## ಏನಿದು ಮಧುಮೇಹ ರೆಟಿನೊಪತಿ?

ಮಧುಮೇಹದ ಪರಿಣಾಮವಾಗಿ ಕಣ್ಣಿನಲ್ಲಿ ಕಾಣಿಸಿಕೊಳ್ಳುವ ತೊಂದರೆ. ದೀರ್ಘಕಾಲಿಕ ಮಧುಮೇಹ ಹಾಗೂ ಅನಿಯಂತ್ರಿತ ಸಕ್ಕರೆಯ ಮಟ್ಟವು ದೇಹದ ಎಲ್ಲಾ ಭಾಗಗಳಲ್ಲಿ ಅತಿ ಚಿಕ್ಕ ರಕ್ತನಾಳಗಳನ್ನು ದುರ್ಬಲಗೊಳಿಸುತ್ತದೆ. ಕಣ್ಣಿನಲ್ಲಿ ದುರ್ಬಲಗೊಂಡ ರಕ್ತನಾಳಗಳಿಂದ ಕೊಂಚ ತೇವಾಂಶ ಹಾಗೂ ರಕ್ತವು ಹೊರಚೆಲ್ಲಿ ಅಕ್ಷಿಪಟಲದಲ್ಲಿ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಮಧುಮೇಹ ರೆಟಿನೊಪತಿ ಎನ್ನುತ್ತೇವೆ.

ದುರ್ಬಲ ರಕ್ತನಾಳಗಳಿರುವ ಅಕ್ಷಿಪಟಲ ಭಾಗಕ್ಕೆ ದೊರಕಬೇಕಾದ ಪೋಷಕಾಂಶಗಳು ಸರಿಯಾಗಿ ದೊರಕುವುದಿಲ್ಲ. ಆಗ ಆ ಭಾಗ

**ನವೆಂಬರ್ 14 ವಿಶ್ವ ಮಧುಮೇಹ ದಿನ**

ಅರೆಜೀವವಾಗುತ್ತದೆ. ಹಂತ ಹಂತವಾಗಿ ಈ ಪ್ರಕ್ರಿಯೆ ಇಡೀ ಅಕ್ಷಿಪಟಲವನ್ನು ಆವರಿಸಿಕೊಳ್ಳುತ್ತದೆ. ಇದರಿಂದ ಅಕ್ಷಿಪಟಲದ ಕಾರ್ಯಕ್ಷಮತೆ ಕುಗ್ಗುವುದಲ್ಲದೆ ಪೋಷಕಾಂಶಗಳ ಪೂರೈಕೆಗಾಗಿ ಹೊಸ ರಕ್ತನಾಳಗಳು ಹುಟ್ಟಿಕೊಳ್ಳುತ್ತವೆ. ಹೊಸ ರಕ್ತನಾಳಗಳು ಮತ್ತಷ್ಟು ದುರ್ಬಲವಾಗಿದ್ದು ಕಣ್ಣಿನ ಒಳಗೆ ಅತಿಯಾದ ರಕ್ತಸ್ರಾವವನ್ನು ಉಂಟುಮಾಡಬಹುದು. ದೃಷ್ಟಿ ತೀರಾ ಕಡಿಮೆಯಾಗಬಹುದು. ಕೆಲವೊಮ್ಮೆ ಈ ರಕ್ತನಾಳಗಳೊಂದಿಗೆ ನಾರಿನಂಶವೂ ಇದ್ದು ಅಕ್ಷಿಪಟಲದ ಕಳಚುವಿಕೆಗೂ ಕಾರಣವಾಗಬಹುದು. ದುರ್ಬಲ ರಕ್ತನಾಳಗಳಿಂದ ಹೊರಚೆಲ್ಲುವ ತೇವಾಂಶವು ಕಣ್ಣಿನ ಕೇಂದ್ರಬಿಂದುವಿನಲ್ಲಿ ಶೇಖರಣೆಯಾಗಿಯೂ ದೃಷ್ಟಿ ಮಂಜಾಗಬಹುದು. ನಾನು ಮೊದಲು ಕೊಟ್ಟ ಉದಾಹರಣೆಯಲ್ಲಿ ಆ ವಯಸ್ಕರ ದೃಷ್ಟಿ ಮಂಜಾಗಲು ಈ ರೀತಿಯ ತೇವಾಂಶದ ಶೇಖರಣೆ ಕಾರಣ.

## ಮಧುಮೇಹಿಗಳಲ್ಲಿ ಕಣ್ಣಿನ ಪರೀಕ್ಷೆ

ಕಣ್ಣಿನ ಆಸ್ಪತ್ರೆಯಲ್ಲಿ ಮಧುಮೇಹಿಗಳಿಗೆ ದೃಷ್ಟಿ ಪರೀಕ್ಷೆ, ಕಣ್ಣಿನ ಮುಂಭಾಗದ ಪರೀಕ್ಷೆ, ಒತ್ತಡದ ಪರೀಕ್ಷೆ ನಂತರ ಪಾಪೆಯನ್ನು ಅಗಲಿಸಿ ಅಕ್ಷಿಪಟಲದ ಪರೀಕ್ಷೆ ನಡೆಯುತ್ತದೆ. ರೆಟಿನೊಪತಿ ಆರಂಭಿಕ ಹಂತದಲ್ಲಿದ್ದರೆ ಅಥವಾ ಇಲ್ಲದಿದ್ದರೆ, ಯಾವುದೇ ಹೆಚ್ಚಿನ ಪರೀಕ್ಷೆಗಳು ಬೇಕಾಗುವುದಿಲ್ಲ. ಸಕ್ಕರೆಯನ್ನು ನಿಯಂತ್ರಣದಲ್ಲಿಟ್ಟು ವರ್ಷಕ್ಕೊಂದು ಬಾರಿ ಪರೀಕ್ಷೆ ಮಾಡಿಸಿಕೊಂಡರೆ ಸಾಕು. ಆದರೆ ಮುಂದಿನ ಹಂತಗಳಲ್ಲಿ ಹೆಚ್ಚಿನ ಪರೀಕ್ಷೆಗಳೂ, ಚಿಕಿತ್ಸೆಗಳೂ ಬೇಕಾಗುತ್ತವೆ. ಪರೀಕ್ಷೆಗಳೆಂದರೆ ಅಕ್ಷಿಪಟಲದ ಚಿತ್ರಗಳು, ಅಕ್ಷಿಪಟಲ ಪದರ ಚಿತ್ರಣ, ಆಂಜಿಯೊಗ್ರಫಿ ಇತ್ಯಾದಿ. ಇವುಗಳಿಂದ ಮಧುಮೇಹ ರೆಟಿನೊಪತಿಯ ಹಂತದ ಸ್ಪಷ್ಟ ಚಿತ್ರಣ ದೊರೆಯುತ್ತದೆ. ಸಮರ್ಪಕ ಚಿಕಿತ್ಸೆಯನ್ನು ನಿರ್ಧರಿಸಬಹುದು ಮತ್ತು ಚಿಕಿತ್ಸೆಯ ಪರಿಣಾಮವನ್ನೂ ಅಳೆಯಬಹುದು.